# ನಿಮ್ಮೊಡನೆ

## ಅನಗತ್ಯ ಶಸ್ತ್ರಚಿಕಿತ್ಸೆಗಳ ಕಮಿಶನ್ ಜಾಲ

> ಪ್ರಮುಖ ನಗರಗಳ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳ ಪ್ರಖ್ಯಾತ ವೈದ್ಯರು, ರೋಗಿಗಳಿಗೆ ಅಗತ್ಯವೇ ಇಲ್ಲದಿದ್ದರೂ ಶಸ್ತ್ರಚಿಕಿತ್ಸೆಗಳನ್ನು ಶಿಫಾರಸು ಮಾಡಲು 30 ರಿಂದ 40 ಸಾವಿರ ರೂಪಾಯಿಗಳ ಕಮಿಶನ್ ರೂಪದ ಲಂಚ ಪಡೆಯುತ್ತಿದ್ದಾರೆ ಎನ್ನುವ ವರದಿಯೊಂದು ಪ್ರಕಟವಾಗಿದೆ! ಇದು ನಿಜಕ್ಕೂ ಗಾಬರಿ ಹುಟ್ಟಿಸುವ ಅಂಶ.

ನಮ್ಮಲ್ಲೀಗ ವೈದ್ಯಕೀಯ ವ್ಯವಸ್ಥೆ ಅತ್ಯುತ್ತಮವಾಗಿದೆ. ಅತ್ಯಾಧುನಿಕ ಸವಲತ್ತುಗಳು, ಯಂತ್ರೋಪಕರಣಗಳು ಬಹುತೇಕ ಎಲ್ಲ ಖಾಸಗಿ ಆಸ್ಪತ್ರೆಗಳಲ್ಲೂ ಲಭ್ಯವಿದೆ. ವೈದ್ಯಕೀಯ ವಿಮೆಯ ಜಾಲವೂ ಬಲವಾಗಿದೆ. ಎಂತಹ ಬಡವನೇ ಇರಲಿ, ತುರ್ತು ಶಸ್ತ್ರಚಿಕಿತ್ಸೆಗಳ ಅಗತ್ಯ ಬಿದ್ದರೆ ಒಂದೇ ದಿನದಲ್ಲಿ ಆಗುತ್ತದೆ. ವಿಮಾ ಕಂಪೆನಿಗಳು ಹಣ ಪಾವತಿಸುತ್ತವೆ. ಬಡವರಾದರೆ ಸರ್ಕಾರದ ಯಶಸ್ವಿನಿ ಯೋಜನೆ ಇದೆ. ಬೆಂಗಳೂರು, ಚೆನ್ನೈ, ದೆಹಲಿ, ಕೋಲ್ಕತ್ತಾ, ಮುಂಬೈ, ನಾಸಿಕ್, ಪುಣೆ ಮತ್ತಿತರ ನಗರಗಳು 'ಮೆಡಿಕಲ್ ಟೂರಿಸಂ ಕೇಂದ್ರ'ಗಳಾಗಿ ಬೆಳೆದಿವೆ. ಎಲ್ಲ ಸರಿ– ಆದರೆ ನಿಜಕ್ಕೂ ರೋಗಿಗೆ ಆ ಶಸ್ತ್ರಚಿಕಿತ್ಸೆಯ ಅಗತ್ಯವಿದೆಯೆ?

–ಹೀಗೊಂದು ಪ್ರಶ್ನೆಯನ್ನು ಕೇಳಲು ಕಾರಣ, ಕಳೆದ ವಾರ ಪ್ರಕಟವಾದ ಒಂದು ಪತ್ರಿಕಾ ವರದಿ. ಪ್ರಮುಖ ನಗರಗಳ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳ ಪ್ರಖ್ಯಾತ ವೈದ್ಯರು ರೋಗಿಗಳಿಗೆ ಅಗತ್ಯವೇ ಇಲ್ಲದಿದ್ದರೂ ಶಸ್ತ್ರಚಿಕಿತ್ಸೆಗಳನ್ನು ಶಿಫಾರಸು ಮಾಡಲು 30 ರಿಂದ 40 ಸಾವಿರ ರೂಪಾಯಿಗಳ ಕಮಿಶನ್ ರೂಪದ ಲಂಚ ಪಡೆಯುತ್ತಿದ್ದಾರೆ ಎನ್ನುತ್ತಿದೆ ಆ ವರದಿ! ಖಾಸಗಿ ಆಸ್ಪತ್ರೆಗಳ ಆಡಳಿತ ಮಂಡಳಿ ಮತ್ತು ವೈದ್ಯರ ನಡುವಣ ಅಪವಿತ್ರ ಮೈತ್ರಿಯ ಬಗ್ಗೆ ಬೆಳಕು ಚೆಲ್ಲಿರುವ ವರದಿ, ಭಾರತದಲ್ಲಿ ಖಾಸಗಿ ವೈದ್ಯಕೀಯ ಕ್ಷೇತ್ರ ಭ್ರಷ್ಟಾಚಾರಕ್ಕೆ ಜಗತ್ತಿನಲ್ಲೇ ಹೆಸರುವಾಸಿಯಾಗಿದೆ ಎಂದು ಬೊಟ್ಟು ಮಾಡಿದೆ.

ಸುಮಾರು 150 ವೈದ್ಯರನ್ನು ಈ ಸಮೀಕ್ಷೆಗಾಗಿ ಸಂಪರ್ಕಿಸಿದಾಗ, ಅವರಲ್ಲಿ 3–4 ಮಂದಿ ಮಾತ್ರ ಯಾವುದೇ ಕಮಿಶನ್‌ನ ಆಸೆ ಇಲ್ಲದೆ, ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡಿರುವುದಾಗಿ ಹೇಳಿದ್ದಾರೆ. ಸುಮಾರು 78 ವೈದ್ಯರು ಇಂತಹ 'ಅನಗತ್ಯ ಶಸ್ತ್ರಚಿಕಿತ್ಸೆ'ಗಳ ಬಗ್ಗೆ ವಿವರವಾಗಿ ಮಾತನಾಡಿದ್ದಾರೆ. ಇವರಲ್ಲಿ 53 ವೈದ್ಯರು ತಮ್ಮ ಕ್ಷೇತ್ರದಲ್ಲಿ 30 ವರ್ಷಗಳಿಗಿಂತಲೂ ಹೆಚ್ಚು ಅನುಭವ ಹೊಂದಿದವರು. 16 ವೈದ್ಯರು 20–30 ವರ್ಷಗಳ ಅನುಭವ ಇರುವವರು. ಹೃದಯದ ಕಾಯಿಲೆ, ಕ್ಯಾನ್ಸರ್ ಮುಂತಾದ ಮಾರಕ ರೋಗಗಳಿಂದ ಹಿಡಿದು, ಕಣ್ಣಿನ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆಯವರೆಗೆ ಬಹುತೇಕ ಎಲ್ಲ ರೀತಿಯ ಶಸ್ತ್ರಚಿಕಿತ್ಸೆಗಳೂ ಈ ಜಾಲದಲ್ಲಿ ಒಳಗೊಂಡಿವೆ. ಎಷ್ಟೋ ಸಲ ರೋಗ ಅಂತಿಮ ಹಂತಕ್ಕೆ ತಲುಪಿದ್ದು ಚಿಕಿತ್ಸೆಯಿಂದ ಯಾವ ಪ್ರಯೋಜನವೂ ಇಲ್ಲ ಎಂಬುದು ಗೊತ್ತಿದ್ದೂ, ವೈದ್ಯರು ಹಲವು ಶಸ್ತ್ರಚಿಕಿತ್ಸೆಗಳಿಗೆ ಶಿಫಾರಸು ಮಾಡಿದ್ದಾರೆ.

ಇದು ನಿಜಕ್ಕೂ ಗಂಭೀರವಾಗಿ ಪರಿಗಣಿಸಬೇಕಾದ ವಿಷಯ. ಸಾಮಾನ್ಯವಾಗಿ ದೊಡ್ಡ ನಗರಗಳಲ್ಲಿ ಜನರು ಹೆಚ್ಚಿನ ಚಿಕಿತ್ಸೆಯ ಬಗ್ಗೆ ಅಭಿಪ್ರಾಯ ಪಡೆಯಲು ಅನುಭವೀ ಖಾಸಗಿ ವೈದ್ಯರ ಬಳಿಗೇ ತೆರಳುತ್ತಾರೆ. ವೈದ್ಯರ ಅನುಭವದ ಬಗ್ಗೆ ಜನರಿಗಿರುವ ನಂಬಿಕೆಯೇ ಇದಕ್ಕೆ ಕಾರಣ. ಆದರೆ ಆಸ್ಪತ್ರೆ ಆಡಳಿತದ ಜತೆಗೆ ಒಳ ಒಪ್ಪಂದ ಮಾಡಿಕೊಳ್ಳುವ ವೈದ್ಯರು ಅಗತ್ಯವೇ ಇಲ್ಲದೆ ಶಸ್ತ್ರಚಿಕಿತ್ಸೆಗಳಿಗೆ ಶಿಫಾರಸು ಮಾಡುತ್ತಾರೆಂದರೆ ಜನಸಾಮಾನ್ಯರು ಯಾರನ್ನು ನಂಬಬೇಕು? ಕೆಲವರು 2ನೇ ಮತ್ತು 3ನೇ ಅಭಿಪ್ರಾಯಗಳನ್ನು ಪಡೆಯಲು ಬೇರೆ ಪ್ರಖ್ಯಾತ ವೈದ್ಯರ ಬಳಿಗೆ ಹೋಗುವುದಿದ್ದರೂ, ಈ ವೈದ್ಯರ ಮಧ್ಯೆಯೂ ಪರಸ್ಪರ ಒಳಹೊಂದಾಣಿಕೆ ಇರುತ್ತದೆ. ಎರಡನೇ, ಮೂರನೆ ವೈದ್ಯರೂ ಮೊದಲ ವೈದ್ಯರ ಅಭಿಪ್ರಾಯವನ್ನೇ ಅನುಮೋದಿಸುತ್ತಾರೆ. ರೋಗಿಗಳನ್ನು ಈ ಜಾಲದಿಂದ ರಕ್ಷಿಸುವವರು ಯಾರು?

ಹಿಂದೆಲ್ಲ ವೈದ್ಯಕೀಯವು ಸೇವಾಕ್ಷೇತ್ರವಾಗಿತ್ತು. ಇವತ್ತು ವೈದ್ಯಕೀಯ ಕ್ಷೇತ್ರ ಉದ್ಯಮವಾಗಿ ಬೆಳೆದಿದೆ. ಉದ್ಯಮ ಎಂದರೆ ಲಾಭ– ನಷ್ಟದ ಲೆಕ್ಕಾಚಾರ ಮಾತ್ರ. ರೋಗಿಗೆ ಅಗತ್ಯವಿಲ್ಲದಿದ್ದರೂ ಪದೇ ಪದೇ ಕ್ಲಿನಿಕಲ್ ಲ್ಯಾಬ್‌ಗೆ ಸಣ್ಣ– ಪುಟ್ಟ ಪರೀಕ್ಷೆಗಳ ವರದಿ ಪಡೆಯಲು ಕಳುಹಿಸುವುದು; ಆ ಲ್ಯಾಬ್‌ನಿಂದ ವೈದ್ಯರು ಕಮಿಶನ್ ಪಡೆಯುವುದು ಇತ್ತೀಚೆಗೆ ಎಲ್ಲ ಸಣ್ಣ ನಗರಗಳಲ್ಲೂ ಕಂಡುಬರುತ್ತಿರುವ ಪಿಡುಗು. ಈಗ ದೊಡ್ಡ ನಗರಗಳ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಿಗೂ ಈ 'ಕಮಿಶನ್ ರೋಗ' ಹಬ್ಬಿರುವುದು ಆತಂಕಕಾರಿ ವಿದ್ಯಮಾನ. ಆರೋಗ್ಯ ಸೌಲಭ್ಯಗಳಿಗೆ ಸಂಬಂಧಿಸಿ ಖಾಸಗಿ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಡುವ ಕೇಂದ್ರ ಸರ್ಕಾರದ ಹೊಸ ಆರೋಗ್ಯ ನೀತಿಯ ಕರಡು ಹೊರಬಂದಿರುವ ಸಮಯದಲ್ಲೇ ಕಮಿಶನ್ ಪಿಡುಗಿನ ಈ ವರದಿ ಪ್ರಕಟವಾಗಿದೆ. ಭಾರತದಲ್ಲಿ ಪೊಲೀಸ್ ಇಲಾಖೆ ಬಿಟ್ಟರೆ ಅತ್ಯಂತ ಹೆಚ್ಚು ಭ್ರಷ್ಟವಾಗಿರುವ ಎರಡನೆಯ ಕ್ಷೇತ್ರ ವೈದ್ಯಕೀಯ ಎನ್ನುವುದನ್ನು 'ಆ್ಯಂಟಿ ಕರಪ್ಷನ್ ವಾಚ್‌ಡಾಗ್ ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್' ಸಂಸ್ಥೆಯೂ ಬಹಿರಂಗಪಡಿಸಿದೆ. ಈ ಪಿಡುಗಿಗೆ ಮದ್ದು ಅರೆಯುವುದಾದರೂ ಹೇಗೆ?

■ ಬಿ.ಎಂ.ಹನೀಫ್



ಈಶ್ವರ್